MANGALORE MARKET REPORTS
MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.46 No:33 ENGLISH DAILY Subscription Yearly - Rs. - MONDAY 30-8-2021

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಇಂಡೋನೇಶ್ಯಾ ಪಾಮೆಣ್ಣೆ ರಫ್ತು ಕರ ಹೆಚ್ಚಳ

ಇಂಡೋನೇಶ್ಯಾ ಕಚ್ಚಾ ಪಾಮೆಣ್ಣೆ ರಫ್ತು ಕರ 13 ಶೇಕಡಾ ಹೆಚ್ಚಳಗೊಳಿಸಿ, ಟನ್ ಗೆ $ 93 ರಿಂದ $ 166 ಕ್ಕೆ ಸೆಪ್ಟೆಂಬರ್ ನಿಂದ ಹೆಚ್ಚಳವಾಗಲಿದೆಯೆನ್ನಲಾಗಿದೆ. ಇದರಿಂದ ಮಲೇಶ್ಯನ್ ಪಾಮೆಣ್ಣೆಗೆ ರಫ್ತು ಹೆಚ್ಚಳವಾಗಲು ಸಹಾಯವಾಗುವ ಸೂಚನೆಯಿಂದ ಮಲೇಶ್ಯನ್ ಪಾಮೆಣ್ಣೆ ದರ 10 ರಿಂಗಟ್ಸ್ (0.2 ಶೇಕಡಾ) ಹೆಚ್ಚಳಗೊಂಡಿದೆ. ಪರ್ಯಾಯ ಖಾದ್ಯ ತೈಲಗಳ ಬೆಲೆ ದುರ್ಬಲವಾಗಿರುವುದರಿಂದ ಮಲೇಶ್ಯನ್ ಪಾಮೆಣ್ಣೆ ದರ ಹೆಚ್ಚಳ ಸೀಮಿತಗೊಂಡಿದೆಯೆನ್ನಲಾಗಿದೆ.

## ಟಾಂಜಾನಿಯಾದಿಂದ ಗೋಡಂಬಿ ತಿರುಳು ಖರೀದಿಗೆ ಮುಂದಾದ ಅಮೇರಿಕನ್ ಸಂಸ್ಥೆ

ಟಾಂಜಾನಿಯಾದಲ್ಲಿ ಉತ್ಪಾದಿಸಿದ ಗೋಡಂಬಿ ತಿರುಳನ್ನು ಪೂರ್ಣ ಪ್ರಮಾಣದಲ್ಲಿ ಖರೀದಿಸಲು ಅಮೇರಿಕನ್ ಸಂಸ್ಥೆಯೊಂದು ಸಿದ್ಧವಾಗಿದೆಯೆನ್ನಲಾಗಿದೆ. ಟಾಂಜಾನಿಯಾ ಪ್ರಸ್ತುತ ಉತ್ಪಾದಿಸಲ್ಪಡುವ ಕಚ್ಚಾ ಗೋಡಂಬಿಯನ್ನು 3 ಲಕ್ಷ ಟನ್ ಗಳಿಂದ 2025/2026 ಕ್ಕೆ 7 ಲಕ್ಷ ಟನ್ ಗಳಿಗೆ ಹೆಚ್ಚಳಗೊಳಿಸುವ ಯೋಜನೆ ಹೊಂದಿದೆಯೆನ್ನಲಾಗಿದೆ. ಇದರೊಂದಿಗೆ ಗೋಡಂಬಿ ತಿರುಳು ಉತ್ಪಾದನೆ ಹೆಚ್ಚಳಗೊಳಿಸಲು ಟಾಂಜಾನಿಯಾ ತಯಾರಿ ನಡೆಸುತ್ತಿದೆಯೆನ್ನಲಾಗಿದೆ.

## ಬೇಡಿಕೆ ಹೆಚ್ಚಳ ಪೂರೈಕೆ ಇಳಿಕೆ, ಬೇಳೆಕಾಳು ದರ ಹೆಚ್ಚಳ

ಬೇಡಿಕೆ ಹೆಚ್ಚಳ ಹಾಗೂ ಪೂರೈಕೆ ಇಳಿಕೆಯಿಂದ ತೊಗರಿಬೇಳೆ, ಹೆಸರುಬೇಳೆ, ಉದ್ದಿನಬೇಳೆ ದರಗಳು ಹಿಂದಿನ ಕೆಲವು ದಿನಗಳಿಂದ 20 ಶೇಕಡಾ ಹೆಚ್ಚಳಗೊಂಡಿದೆಯೆನ್ನಲಾಗಿದೆ. ಇದರೊಂದಿಗೆ ಪ್ರತಿಕೂಲ ಹವಾಮಾನದಿಂದ ಖಾರಿಫ್ ಸೀಜನ್ ನ ಬೇಳೆಕಾಳು ಉತ್ಪಾದನೆಯಲ್ಲಿ ವ್ಯತ್ಯಯವಾಗುವ ಊಹೆಯೂ ದರ ಹೆಚ್ಚಳವಾಗಲು ಪೂರಕವಾಗಿದೆ.ಸ